ಅ) ಯಾವ ಕ್ರಮ ಕೈಗೊಂಡಿರುವುದಿಲ್ಲ.

ಆ) ಅಂತಹ ಯಾವ ಯೋಜನೆಯೂ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಗೊಳ್ಳಿ ರಾಯಣ್ಣ ವಂಶಜರಿಗೆ ಸರ್ಕಾರದಿಂದ ಸಹಾಯ

136 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಂಗೊಳ್ಳಿ ರಾಯಣ್ಣನ ವಂಶಜರು ಸರ್ಕಾರದಿಂದ ತಮಗೆ ಸಹಾಯ ಮಾಡಬೇಕೆಂದು ಮನವಿಗಳನ್ನು ಸಲ್ಲಿಸಿರುವ ಸಂಗತಿ ನಿಜವೇ?*

ಆ) *ಹಾಗಿದ್ದಲ್ಲಿ ಅವರಿಗೆ ಸರ್ಕಾರದವತಿ ಯಾವ್ಯಾವ ಸವಲತ್ತುಗಳನ್ನು ಕೊಡಬೇಕೆಂದು ನಿರ್ಣಯಿಸಿರುವುದು.*

ಇ) *ಒಂದು ವೇಳೆ ಇದುವರೆಗೂ ನಿರ್ಣಯಿಸದೇ ಇದ್ದಲ್ಲಿ ಕಿತ್ತೂರು ಚೆನ್ನಮ್ಮನ ವಂಶಜರಿಗೆ ಯಾವ ಪ್ರಕಾರವಾಗಿ ಸವಲತ್ತುಗಳನ್ನು ಕೊಡಲಾಗುತ್ತಿದೆಯೋ, ಅದೇ ಪ್ರಕಾರವಾಗಿ ಸಂಗೊಳ್ಳಿ ರಾಯಣ್ಣನ ವಂಶಜರಿಗೆ ಕೂಡ ಸರ್ಕಾರದವರು ಸಹಾಯವನ್ನು ಕೊಡುವುದೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ- ಆದರೆ ಅರ್ಜಿ ಸಲ್ಲಿಸಿರುವವರು ಸಂಗೊಳ್ಳಿ ರಾಯಣ್ಣನ ವಂಶಜರಾಗಿರದೆ ಅವರ ತಾತನ ಸಹೋದರನ ಎಳನೇ ತಲೆಮಾರಿನವರಾಗಿದ್ದು, ಅಪರ್ಯಾಪ್ತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಪ್ರಾರಂಭ

77 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲು ಸರ್ಕಾರಕ್ಕೆ ಸಾರ್ವಜನಿಕರಿಂದ ಮನವಿಗಳು ಬಂದಿವೆಯೇ?*

ಆ) *ಹಾಗಿದ್ದಲ್ಲಿ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?*

ಇ) *ಹೈಕೋರ್ಟಿನವರು ಹುಬ್ಬಳ್ಳಿ ಧಾರವಾಡ ನಡುವೆ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲು ಸಮ್ಮತಿಯನ್ನು ನೀಡಿದ ಸಂಗತಿ ನಿಜವೇ?*

ಈ) *ರಾಜ್ಯ ಸರ್ಕಾರದ ನಿರ್ಲಕ್ಷತನದಿಂದ ಇದುವರೆಗೂ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲಾಗದಿರುವ ಸಂಗತಿ ನಿಜವೇ?*

ಉ) *ಒಂದು ವೇಳೆ ಸರ್ಕಾರವು ಆಶ್ವಾಸನೆ ನೀಡಿದ ಪ್ರಕಾರ ಹೈಕೋರ್ಟ್ ಪೀಠವನ್ನು ಬೇಗನೆ ಪ್ರಾರಂಭ ಮಾಡದೇ ಇದ್ದಲ್ಲಿ ಪುನಃ ಹುಬ್ಬಳ್ಳಿ ಧಾರವಾಡ ವಕೀಲ ಸಂಘದವರು ಉಪವಾಸ ಸತ್ಯಾಗ್ರಹ ಮಾಡುವುದಾಗಿ ಸರ್ಕಾರಕ್ಕೆ ಮನವಿಗಳು ಕಳುಹಿಸಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಊ) *ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಹೈಕೋರ್ಟ್ ಪೀಠವನ್ನು ಹುಬ್ಬಳ್ಳಿ ಧಾರವಾಡದ ನಡುವೆ ಪ್ರಾರಂಭಿಸಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):